**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 15.01.2025**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ಎಂ ವಕೀಲರಿಂದಃ**

1. ವಾದಿಗಳು ಸಲ್ಲಿಸಿರುವ ದಾವೆಯ ಪರಿಹಾರದ ಬಗ್ಗೆ ತಿಳಿದುಕೊಂಡಿದ್ದೇನೆ. ನಾನು ಡಿಗ್ರಿ ವರೆಗೆ ಓದಿರುತ್ತೇನೆ. 2 ನೇ ಪ್ರತಿವಾದಿ ನನಗೆ ಸಂಬಂಧಿಕರಲ್ಲ. 2 ನೇ ಪ್ರತಿವಾದಿಗೂ ನನಗೂ ಯಾವುದೇ ವ್ಯವಹಾರ ಇಲ್ಲ. 1 ನೇ ಪ್ರತಿವಾದಿ ಮತ್ತು ವಾದಿಗಳ ಪರಿಚಯ ನನಗಿಲ್ಲ. 1 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸ್ವಂತವಾಗಿ ತೆಗೆದುಕೊಂಡಿದ್ದ ಭೂಮಿಯನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದು 2 ನೇ ಪ್ರತಿವಾದಿ ನನ್ನ ಬಳಿ ಹೇಳಿರುತ್ತಾರೆ. ದಾವಾ ಐಟಂ 1, 1 ನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದು ನಿರ್ಧರಿಸಿಕೊಳ್ಳಲು ಆ ಆಸ್ತಿಗೆ ಸಂಬಂಧಿಸಿದ ಆರ್ ಟಿ ಸಿ, ಇಸಿ, ಇತರೆ ದಾಖಲೆಗಳನ್ನು ನೋಡಿದ್ದೇನೆ. ಆ ದಾಖಲಾತಿಗನಳ್ಳು ನ್ಯಾಯಾಲಯಕ್ಕೆ ಕೊಡುತ್ತೀರಾ ಎಂದರೆ ಸಾಕ್ಷಿ ದಾಖಲೆಗಳನ್ನು ನಾನು ನೋಡಿಲ್ಲವೆಂದು ಹೇಳುತ್ತಾರೆ. ದಾವಾ ಷೆಡ್ಯೂಲ್ ಐಟಂ 1, 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ವಾದಿಗಳಿಗೆ ಐಟಂ 1 ರ ಆಸ್ತಿಯಲ್ಲಿ ಸಮಾನ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ.

2. ವಾದಿಗಳು ದಾವೆಯಲ್ಲಿ ಎದುರುದಾರರನ್ನಾಗಿ ಯಾರ್ಯಾರನ್ನು ಮಾಡಿರುತ್ತಾರೆಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ದಾವೆ ಹಾಕಿದ ನಂತರ 2 ನೇ ಪ್ರತಿವಾದಿಯನ್ನು ಭೇಟಿ ಮಾಡಿ ದಾವೆಯ ಬಗ್ಗೆ ವಿಚಾರಿಸಿರುತ್ತೇನೆ. 2 ನೇ ಪ್ರತಿವಾದಿ ಅದರ ಬಗ್ಗೆ ನೀವು ತಲೆ ಕೆಡಿಸಿಕೊಳ್ಳೇಡಿ ನಾವು

ನೋಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಪ್ರಮಾಣಪತ್ರದ ಸಂಗತಿಗಳು ಎಲ್ಲವು ನನಗೆ ಗೊತ್ತಿದೆ. ದಾವಾ ಐಟಂ 1, 1 ನೇ ಪ್ರತಿವಾದಿಗೆ ಪಂಚಾಯತ್ ಪಾಲುಪಟ್ಟಿ ಮೂಲಕ ಬಂದಿದೆ ಎಂದರೆ ಅದು ಗೊತ್ತಿಲ್ಲ, ಈಗ ಉದ್ದೇಶಪೂರ್ವಕವಾಗಿ ದಾವೆ ಹಾಕಿದ್ದಾರೆಂದು ಹೇಳುತ್ತಾರೆ. 2 ನೇ ಪ್ರತಿವಾದಿ ಮುೂಲಕ ವಾದಿಗಳ ಬಗ್ಗೆ ವಿಚಾರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ 2 ನೇ ಪ್ರತಿವಾದಿ ಆ ಜಮೀನಿನ ಮಾಲೀಕರಾಗಿದ್ದರಿಂದ ನಾನು ಅವರಿಂದ ಜಮೀನನ್ನು ಪಡೆದುಕೊಂಡೆ ಎಂದು ಹೇಳುತ್ತಾರೆ.

3. ದಾವಾ ಐಟಂ 1 ಈಗಲೂ 1 ನೇ ಪ್ರತಿವಾದಿಯ ಕುಟುಂಬದ ಸ್ವಾಧೀನಾನುಭವದಲ್ಲಿದೆ ಎಂದರೆ ಸರಿಯಲ್ಲ. ದಾವಾ ಐಟಂ 1 ರ ಚೆಕ್ಕುಬಂದಿ ಹೇಳುತ್ತೇನೆ. ಪೂರ್ವಕ್ಕೆ ಮೈಸೂರು ಕೆ ಆರ್ ಪೇಟೆ ಮುಖ್ಯ ರಸ್ತೆ, ಪಶ್ಚಿಮಕ್ಕೆ ಶಿವರಾಮೇಗೌಡರ ಜಮೀನು, ಉತ್ತರಕ್ಕೆ ಪಾಪೇಗೌಡರ ಜಮೀನು ಮತ್ತು ದಕ್ಷಿಣಕ್ಕೆ ಸಣ್ಣಪಾಪೇಗೌಡರ ಜಮೀನು. ದಾವಾ ಐಟಂ 1 ಕೆ ಆರ್ ಪೇಟೆ ಮುಖ್ಯ ರಸ್ತೆಯ ಪಶ್ಚಿಮಕ್ಕೆ ಇದೆ ಎಂದರೆ ಸಾಕ್ಷಿ ಪೂರ್ವಕ್ಕಿದೆ ಎಂದು ಹೇಳುತ್ತಾರೆ. ದಾವಾ ಐಟಂ 1 ರ ಸ್ವತ್ತು 1 ಗುಂಟೆಗೆ ಈಗ ರೂ.5 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಪ್ರಸ್ತುತ ರೂ.1 ಲಕ್ಷವಾಗುತ್ತದೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಗೆ ದಾವಾ ಐಟಂ ಸ್ವತ್ತು 1 ನ್ನು ಮಾರಾಟ ಮಾಡಲು 1 ನೇ ಪ್ರತಿವಾದಿಗೆ ಯಾವುದೇ ದರದ್ದು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ 1 ನೇ ಪ್ರತಿವಾದಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾರಾಟ ಮಾಡಿದರು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ದಾವಾ ಐಟಂ 1 ನ್ನು ಮಾರಾಟ ಮಾಡಲು ಸ್ವತಂತ್ರ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ .

4. ದಾವಾ ಐಟಂ 1 ರ ಸ್ವತ್ತಿನಲ್ಲಿ ನೀವು ಯಾವತ್ತು ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ನೀವು ಮತ್ತು 1, 2 ನೇ ಪ್ರತಿವಾದಿಗಳು ಪರಸ್ಪರ ಷಾಮೀಲು ಮಾಡಿಕೊಂಡು ಕ್ರಯ ಪತ್ರಗಳನ್ನು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಖರೀದಿಸಿದ್ದ ಕ್ರಯಪತ್ರವನ್ನು ನಾನು ನೋಡಿದ್ದೇನೆ. ವಾದಿಗಳು 2 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ ಬರೆದುಕೊಟ್ಟಿರುವ ಕ್ರಯಪತ್ರದಲ್ಲಿ ಸಹಿ ಮಾಡಿಲ್ಲ ಎಂದರೆ ಸಾಕ್ಷಿ ಅದು ಗೊತ್ತಿಲ್ಲವೆಂದು ಹೇಳುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತುಗಳಿಗಿಂತ ಐಟಂ 1 ರ ಸ್ವತ್ತು ಹೆಚ್ಚಿನ ಬೆಲೆ ಬಾಳುವ ಆಸ್ತಿ ಎಂದರೆ ಸಾಕ್ಷಿ ಇತ್ತೀಚೆಗೆ ಸ್ವಲ್ಪ ಬೆಲೆ ಏರಿಕೆಯಾಗಿದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಕುಡಿಯುವ ಅಭ್ಯಾಸ ಹಾಗೂ ಇತರ ಕೆಟ್ಟ ಅಭ್ಯಾಸಗಳನ್ನು ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರಗಳನ್ನು ವಾದಿಗಳ ಹಿಸ್ಸಾ ಹಕ್ಕನ್ನು ಮೊಟಕುಗೊಳಿಸಲು ನೀವು ಮತ್ತು ಇತರ ಪ್ರತಿವಾದಿಗಳು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ವಾದಿಗಳಿಗೆ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಗಳ ಕುಟುಂಬಕ್ಕೆ ಎಷ್ಟು ವಿಸ್ತೀರ್ಣದ ಬೇರೆ ಆಸ್ತಿಗಳು ಇವೆ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ.

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬರೆಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***